<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 2162 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕುಶಾಲಪ್ಪ.ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 26.03.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಅಬಕಾರಿ ಇಲಾಖೆಯಿಂದ ನೀಡಲಾಗುತ್ತಿರುವ ಬಾರ್ ಲೈಸೆನ್ಸ್‌ಗಳು ಯಾವುವು; ಯಾವ ಯಾವ ವಿಧದ ಬಾರ್ ಲೈಸೆನ್ಸ್‌ಗಳು ಇಲಾಖೆಯಿಂದ ಕಾರ್ಯನಿರ್ವಹಿಸುತ್ತಿವೆ; ಆ ಲೈಸೆನ್ಸ್ ಪಡೆಯಲು ಇರುವ ನಿಯಮಾವಳಿಗಳೇನು; | 1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 ಮತ್ತು ಸಿಎಲ್-9 ಸನ್ನದನ್ನು ನೀಡಲು ನಿರ್ಬಂಧವಿದ್ದು, ಹೊಸದಾಗಿ ಯಾವುದೇ ಸಿಎಲ್-2, ಸಿಎಲ್-9 ಮತ್ತು ಪಬ್ (ಸ್ವತಂತ್ರ ಆರ್.ವಿ.ಬಿ) ಸನ್ನದುಗಳನ್ನು ನೀಡಲಾಗುತ್ತಿಲ್ಲ.<br><br>ರಾಜ್ಯದಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ಮತ್ತು ಇತರೆ ಸನ್ನದುಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3 ಮತ್ತು 5 ರಡಿ ಹೊಸದಾಗಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ.<br><br>ವೈನ್ ಟ್ಯಾವರ್ನ್ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿ ಮಂಜೂರು ಮಾಡಲಾಗುತ್ತಿದೆ.<br><br>ಮೈಕ್ರೋಬ್ರಿವರಿ ಸನ್ನದುಗಳನ್ನು ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳು, 1967 ರ ನಿಯಮ 27-ಎ ರನ್ವಯ ಮಂಜೂರು ಮಾಡಲಾಗುತ್ತಿದೆ.<br><br>ಪ್ರಸ್ತುತ ರಾಜ್ಯದಲ್ಲಿ, ಊಟದೊಂದಿಗೆ ಮದ್ಯ ಸೇವಿಸಲು ಅವಕಾಶ ಇರುವ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9, ಸಿಎಲ್- |

<table>
<tr><td></td><td></td><td>14, ಸಿಎಲ್-15, ಸಿಎಲ್-17, ಸಿಎಲ್-18, ವೈನ್ ಟ್ಯಾವರ್ನ್, ಸ್ವತಂತ್ರ ಆರ್.ವಿ.ಬಿ, ಮೈಕ್ರೋಬ್ರೀವರಿ ಸನ್ನದುಗಳು ಕಾರ್ಯನಿರ್ವಹಿಸುತ್ತಿವೆ.ಎಲ್ಲಾ ಬಗೆಯ ಲೈಸನ್ಸ್ ಪಡೆಯಲು ಇರುವ ನಿಯಮಾವಳಿಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿರುವ ಒಟ್ಟು ಬಾರ್‌ಗಳ ಸಂಖ್ಯೆ ಎಷ್ಟು; ಯಾವ ವಿಧದ ಬಾರ್‌ಗಳು ಕಾರ್ಯನಿರ್ವಹಿಸುತ್ತಿವೆ;<br>(ಮಾಲೀಕರ ವಿವರ ನೀಡುವುದು)</td><td>ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನುದುಗಳ ವಿವರ ಈ ಕೆಳಕಂಡಂತಿರುತ್ತದೆ.<br>
<table>
<tr><th>ಕ್ರ.ಸಂ</th><th>ಸನ್ನದುಗಳ ವಿಧ</th><th>ಸನ್ನದುಗಳ ಸಂಖ್ಯೆ</th></tr>
<tr><td>1.</td><td>ಸಿಎಲ್-4</td><td>20</td></tr>
<tr><td>2.</td><td>ಸಿಎಲ್-6(ಎ)</td><td>05</td></tr>
<tr><td>3.</td><td>ಸಿಎಲ್-7</td><td>63</td></tr>
<tr><td>4.</td><td>ಸಿಎಲ್-9</td><td>65</td></tr>
<tr><td>5.</td><td>ಸಿಎಲ್-14</td><td>01</td></tr>
<tr><td>6.</td><td>ಹೊಂದಿಕೊಂಡಂತೆ ಆರ್.ವಿ.ಬಿ</td><td>05</td></tr>
<tr><td>7.</td><td>ವೈನ್ ಟ್ಯಾವರ್ನ್</td><td>01</td></tr>
<tr><td>ಒಟ್ಟು</td><td></td><td>160</td></tr>
</table>
ಮಾಲೀಕರುಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿ ಸರಬರಾಜನ್ನು ತಡೆಯಲು ಹಾಗೂ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ವಿವರ ನೀಡುವುದು)</td><td>ಕಳ್ಳಭಟ್ಟಿ/ಅಕ್ರಮ ಸಾರಾಯಿ ಸಂಬಂಧ ಇಲಾಖೆಯು ಶೂನ್ಯ ಸಹಿಷ್ಣುತೆಯನ್ನು ಹೊಂದಿದ್ದು, ಕಳ್ಳಭಟ್ಟಿ ತಯಾರಿಕೆ ಪತ್ತೆ ಹಚ್ಚುವ ಹಾಗೂ ತಡೆಗಟ್ಟುವ ನಿಟ್ಟಿನಲ್ಲಿ ಕಳ್ಳಭಟ್ಟಿ ಕೇಂದ್ರಗಳ ಮೇಲೆ ವ್ಯವಸ್ಥಿತವಾಗಿ ಅಬಕಾರಿ ದಾಳಿ ನಡೆಸುವ ನಿರಂತರ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.<br><br>ಕಳ್ಳಭಟ್ಟಿ ತಯಾರಿಕೆಗೆ ಬಳಸಲ್ಪಡುವ ಕಚ್ಚಾ ವಸ್ತುಗಳನ್ನು ಒದಗಿಸುವವರ ಮೇಲೂ ನಿಗಾ ಇಡಲಾಗಿದ್ದು, ಹಿಂದಿನ ಪ್ರಕರಣಗಳ ಪೂರ್ವಾಪರಾಧಿಗಳ ಚಲನ-ವಲನಗಳ ಬಗ್ಗೆ ಅಬಕಾರಿ ಗಸ್ತಿನ ವೇಳೆಯಲ್ಲಿ ನಿಗಾ ಇಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಇತರೆ</td></tr>
</table>

| | | |
|---|---|---|
| | | ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಹತ್ತಿಕ್ಕಲು ಕ್ರಮವಹಿಸುವ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಜಂಟಿ ಕಾರ್ಯಚರಣೆ ನಡೆಸಲಾಗುತ್ತಿದೆ.<br><br>ಹಾಗೆಯೇ ಹೊರ ರಾಜ್ಯಗಳಿಂದ ಅಕ್ರಮವಾಗಿ ಸಾಗಾಟವಾಗುವ ಕಳ್ಳಭಟ್ಟಿ ಸಾರಾಯಿಯನ್ನು ತಡೆಗಟ್ಟಲು ನಿಯಮಿತವಾಗಿ ರಸ್ತೆಗಾವಲು ಮತ್ತು ರಸ್ತೆ ಗಸ್ತು ಕೈಗೊಂಡು ವಾಹನಗಳ ಹಾಗೂ ವ್ಯಕ್ತಿಗಳ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. ನೆರೆಯ ರಾಜ್ಯಗಳ ಅಬಕಾರಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪೂರ್ವಾಪರಾಧಿಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿ ಜಂಟಿ ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆ.<br><br>ರಾಜ್ಯಾದ್ಯಂತ ಕಳ್ಳಭಟ್ಟಿ/ಸಾರಾಯಿ ಅಕ್ರಮದಲ್ಲಿ ತೊಡಗುವವರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಜಾಮೀನೀಯವಲ್ಲದ (nonbailable) ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ (2024-25 ಜುಲೈ ರಿಂದ ಜೂನ್ ವರೆಗೆ ಹಾಗೂ 2025-26 ಜುಲೈ ರಿಂದ ಜನವರಿ ಮಾಹೆವರೆಗೆ) ಕಳ್ಳಭಟ್ಟಿ ವಿರುದ್ಧ ಒಟ್ಟು 20,513 ದಾಳಿಗಳನ್ನು ನಡೆಸಿ, 729 ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 266 ಆರೋಪಿತರನ್ನು ದಸ್ತಗಿರಿಗೊಳಪಡಿಸಿ, ಒಟ್ಟು 6,471 ಲೀಟರ್ ಕಳ್ಳಭಟ್ಟಿ ವಶಪಡಿಸಿಕೊಳ್ಳಲಾಗಿರುತ್ತದೆ. |

ಅಇ 50 ಇಎಲ್‌ಕ್ಯೂ 2026

(ಆರ್.ಬಿ.ತಿಮ್ಮಾಪೂರ)

ಅಬಕಾರಿ ಸಚಿವರು

ಅನುಬಂಧ-1

1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 ಮತ್ತು ಸಿಎಲ್-9 ಸನ್ನದನ್ನು ನೀಡಲು ಸರ್ಕಾರ ನಿರ್ಬಂಧಿಸಿರುವುದರಿಂದ ಅಬಕಾರಿ ಇಲಾಖೆಯಿಂದ ಹೊಸದಾಗಿ ಯಾವುದೇ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳ ಮಂಜೂರಾತಿ ನೀಡಲಾಗುತ್ತಿಲ್ಲ.

ರಾಜ್ಯದಲ್ಲಿ ಸಿಎಲ್-4, ಸಿಎಲ್-6, ಸಿಎಲ್-6ಎ, ಸಿಎಲ್-7, ಸಿಎಲ್-11ಸಿ ಮತ್ತು ಇತರೆ ಪರವಾನಗಿಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3 ಮತ್ತು 5 ರಡಿ ಹೊಸದಾಗಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ.

ಹೊಸದಾಗಿ ಮಂಜೂರು ಮಾಡುವ ಎಲ್ಲಾ ಸನ್ನದುಗಳಿಗೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 8, 8-ಎ ರಲ್ಲಿ ನಿಗದಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಅರ್ಜಿದಾರರಿಂದ ಪಾವತಿಸಿಕೊಂಡು ಅರ್ಜಿ ಪಡೆಯಲಾಗುತ್ತದೆ. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಬಹುಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಜನಾಂಗದವರು ವಾಸಿಸುವ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.

ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5(1) ರನ್ವಯ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುವ ಸ್ಥಳದಲ್ಲಿ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164-12166/2016 ರ ದಿನಾಂಕ:31-03-2017 ರಲ್ಲಿ ಆದೇಶಿಸಿದಂತೆ 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000 ಮತ್ತು 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು

ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.

2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.

ಮುಂದುವರೆದು,ದಿನಾಂಕ:19.01.2022ರಲ್ಲಿ ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ.

ದಿನಾಂಕ: 13.01.2023ರಿಂದ ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗುತ್ತಿದೆ.

ಅಧಿಸೂಚನೆ ಸಂಖ್ಯೆ:ಆಇ/09/ಪಿಇಎಸ್/2022,ದಿನಾಂಕ:16-08-2024 ರಲ್ಲಿ ರಾಜ್ಯ ಹೆದ್ದಾರಿಗಳು ಅಥವಾ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ಉಪ ನಿಯಮ(1) ನಲ್ಲಿರುವ ಯಾವುದೂ, 2011ರ ಜನಗಣತಿಯನ್ವಯ 3000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯಿತಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ನಮೂನೆ 6ಎ ಮತ್ತು ನಮೂನೆ-7 ನಲ್ಲಿ ಮಂಜೂರು ಮಾಡಲಾಗಿರುವ ಹೊಸ ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿದ್ದುಪಡಿತರಲಾಗಿರುತ್ತದೆ. ಹಾಗೂ ಇದೇ ಉಪ ನಿಯಮ (2) ಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸರ್ಕಾರಗಳ ಯಾವುದೇ ಕಛೇರಿಯಿಂದ ದೂರದ ಮಾನದಂಡಗಳಿಗೆ ಸಂಬಂಧಿಸಿದಂತೆ ಉಪ ನಿಯಮ (1) ರಲ್ಲಿರುವ ಯಾವುದೂ, ಮಹಾನಗರ

ಮಿತಿಯೊಳಗೆ ನಮೂನೆ ಸಿಎಲ್-4, ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ರಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ಅನ್ವಯಿಸುವುದಿಲ್ಲವೆಂದು ಹಾಗೂ ಮಹಾನಗರ ಮಿತಿಯೊಳಗೆ ಅಸ್ತಿತ್ವದಲ್ಲಿರುವ ನಮೂನೆ ಸಿಎಲ್-4, ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ಸನ್ನದುಗಳಿಗೆ ಅನ್ವಯಿಸುವುದಿಲ್ಲ ಮತ್ತು ಅಂತಹ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗಿರುತ್ತದೆ ಎಂದು ತಿದ್ದುಪಡಿ ತರಲಾಗಿದೆ.

ಅಧಿಸೂಚನೆ ಸಂಖ್ಯೆ:ಆಇ/09/ಪಿಇಎಸ್/2022, ದಿನಾಂಕ:16-08-2024 ರಲ್ಲಿ "ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಿಗಳ ಯಾವುದೇ ಕಛೇರಿಯಿಂದ ದೂರದ ಮಾನದಂಡಗಳಿಗೆ ಸಂಬಂಧಿಸಿದಂತೆ ಉಪನಿಯಮ 01 ರಲ್ಲಿ ಯಾವುದೂ, ಮಹಾನಗರ ಮಿತಿಯೊಳಗೆ ನಮೂನೆ ಸಿಎಲ್-4 ಅಥವಾ ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ರಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ಅನ್ವಯಿಸುವುದಿಲ್ಲ ಹಾಗೂ ಅಸ್ತಿ ತ್ವದಲ್ಲಿರುವ ನಮೂನೆ ಸಿಎಲ್-4 ಅಥವಾ ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ರಲ್ಲಿರುವ ಸನ್ನದುಗಳಿಗೆ ಸಹ ಅನ್ವಯಿಸುವುದಿಲ್ಲ. ಮತ್ತು ಅಂತಹ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗಿರುತ್ತದೆ ಎಂದು ತಿದ್ದುಪಡಿ ತರಲಾಗಿರುತ್ತದೆ.

**ಸಿಎಲ್-2 (ಚಿಲ್ಲರೆ ಮದ್ಯ ಮಾರಾಟ):** ಸಿಎಲ್-2 ಸನ್ನದುಗಳಲ್ಲಿ ಮದ್ಯವನ್ನು ಪಾರ್ಸಲ್ ಮೂಲಕ ಮಾತ್ರ ಮಾರಾಟ ಮಾಡಬೇಕಾಗಿರುತ್ತದೆ. ಸನ್ನದು ಆವರಣದಲ್ಲಿ ಕುಡಿಯಲು ಅವಕಾಶವಿರುವುದಿಲ್ಲ.

**ಸಿಎಲ್-9 (ಬಾರ್ ಅಂಡ್ ರೆಸ್ಟೋರೆಂಟ್):-** ಸಿಎಲ್-9 ಸನ್ನದುಗಳಲ್ಲಿ ಸನ್ನದು ಆವರಣದಲ್ಲಿ ಊಟದೊಂದಿಗೆ ಮದ್ಯವನ್ನು ಸೇವಿಸಲು ಅವಕಾಶವಿದ್ದು ಪಾರ್ಸಲ್ ಮಾರಾಟಕ್ಕೆ ಅವಕಾಶವಿರುವುದಿಲ್ಲ. ಸದರಿ ಸನ್ನದಿನಲ್ಲಿ ಊಟದ ಹಾಲ್ ಕನಿಷ್ಠ 400 ಚದರ ಅಡಿಗಳಿರಬೇಕು. ಅಡುಗೆ ಕೋಣೆ ಮತ್ತು ಶೌಚಾಲಯಗಳು ಪ್ರತ್ಯೇಕವಾಗಿರಬೇಕು. ಗ್ರಾಹಕರು ಅಡುಗೆ ಕೋಣೆಯ ಮೂಲಕ ಶೌಚಾಲಯಕ್ಕೆ ಹೋಗುವಂತೆ ಮಾರ್ಗವು ಇರಬಾರದು. ಪುರುಷ ಮತ್ತು ಮಹಿಳೆಯರ ಪ್ರತ್ಯೇಕ ಶೌಚಾಲಯಗಳು ಇರಬೇಕು ಹಾಗೂ ಹರಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುತ್ತದೆ.

**ಸಿಎಲ್-4 (ಕ್ಲಬ್):-** ಸಿಎಲ್-4 ಸನ್ನದನ್ನು ಏಜೆಂಟ್, ಕಾರ್ಯದರ್ಶಿ ಅಥವಾ ಕ್ಲಬ್‌ನ ವ್ಯವಸ್ಥಾಪಕರುಗಳಿಗೆ ಫಾರಂ ಸಿಎಲ್-4 ನಲ್ಲಿ ಸನ್ನದನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡುತ್ತಾರೆ. ಕರ್ನಾಟಕ ಸರ್ಕಾರದ ಸೊಸೈಟಿ ರಿಜಿಸ್ಟ್ರೇಶನ್ ಕಾಯ್ದೆ 1960 (ಕರ್ನಾಟಕ ಆಕ್ಟ್ 17 ಆಫ್ 1960) ಇಂಡಿಯನ್ ಟ್ರಸ್ಟ್ ಕಾಯ್ದೆ 1882, ಕಲಂ 25 ರ ಕಂಪನಿ ಕಾಯ್ದೆ 1956, ಹಾಗೂ ಕಲಂ 8 ರ ಕಂಪನೀ ಕಾಯ್ದೆ 2013 ರಡಿ ಕ್ಲಬ್ ಅನ್ನು 3 ವರ್ಷಗಳಿಗೆ

ಕಡಿಮೆ ಇಲ್ಲದಂತೆ ನೊಂದಾಯಿಸಬೇಕಾಗಿರುತ್ತದೆ ಹಾಗೂ ಕ್ಲಬ್ 100 ಜನ ಕಾಯಂ ಸದಸ್ಯರನ್ನು ಹೊಂದಿರಬೇಕು. ಸ್ವಂತ ಕಟ್ಟಡ ಇಲ್ಲವೇ 11 ವರ್ಷಗಳ ಅವಧಿಗೆ ಕಟ್ಟಡವನ್ನು ಲೀಸ್ ಆಧಾರದ ಮೇಲೆ ಪಡೆದಿರಬೇಕು. ಕ್ಲಬ್‌ನಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳನ್ನು ನಡೆಸಲು ಸೌಲಭ್ಯಗಳನ್ನು ಕಲ್ಪಿಸಬೇಕು. ಕ್ಲಬ್‌ನ ಸದಸ್ಯರುಗಳಿಗೆ ಮದ್ಯ ಹಾಗೂ ಆಹಾರವನ್ನು ಸೇವಿಸಲು ಸೂಕ್ತ ಸೌಲಭ್ಯಗಳನ್ನು ಕಲ್ಪಿಸಬೇಕು. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಶೌಚಾಲಯವನ್ನು ನಿರ್ಮಿಸಿ ಹರಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿರಬೇಕು.

**ಸಿಎಲ್-7:-** ಸನ್ನದು (ಹೋಟೆಲ್ ಮತ್ತು ವಸತಿ ಗೃಹಗಳು) ಎಂದರೆ:- ವಸತಿ ಗೃಹಗಳಲ್ಲಿ ತಂಗುವ ಗ್ರಾಹಕರಿಗೆ ಮತ್ತು ಅವರ ಅತಿಥಿಗಳಿಗೆ ಊಟದೊಂದಿಗೆ ಮದ್ಯವನ್ನು ಸೇವಿಸುವವರಿಗೆ ಮತ್ತು ಸಾಂದರ್ಭಿಕ ಸಂದರ್ಶಕರುಗಳಿಗೆ ಮದ್ಯ ಸೇವಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ.

**ಸಿಎಲ್-11ಸಿ:-** ಸಿಎಲ್-11(ಸಿ) ಸನ್ನದುಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡಲಾಗುತ್ತಿದೆ. ಸಿಎಲ್-11(ಸಿ) ಸನ್ನದುಗಳಲ್ಲಿ ಮದ್ಯವನ್ನು ಪಾರ್ಸಲ್ ಮೂಲಕ ಮಾತ್ರ ಮಾರಾಟ ಮಾಡಬೇಕಾಗಿರುತ್ತದೆ. ಸನ್ನದು ಆವರಣದಲ್ಲಿ ಕುಡಿಯಲು ಅವಕಾಶವಿರುವುದಿಲ್ಲ. ಎಂ.ಎಸ್.ಐ.ಎಲ್ ಮದ್ಯದ ಮಳಿಗೆಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿರುತ್ತವೆ:

ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ/07/ಇಎಫ್‌ಎಲ್/2008 ದಿನಾಂಕ: 03/07/2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ/15/ಇಎಫ್‌ಎಲ್/ 2015 ದಿ:23-09-2016 ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕು ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11-ಸಿ ಸನ್ನದುಗಳನ್ನು ಕೆಳಕಂಡ ಷರತ್ತುಗಳನ್ನು ವಿಧಿಸಿ ಎಂ.ಎಸ್.ಐ.ಎಲ್ ಸಂಸ್ಥೆಗೆ ಮಂಜೂರಾತಿ ನೀಡಲು ಸರ್ಕಾರವು ಅನುಮತಿ ನೀಡಿರುತ್ತದೆ.

i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗದಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.

iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.

ದಿನಾಂಕ:08-09-2020ರಲ್ಲಿ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಬಾಕಿ ಉಳಿದಿರುವ 441 ಸಿಎಲ್-11ಸಿ ಕೋಟಾದಡಿಯಲ್ಲಿನ ಸನ್ನದುಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಲಾಗಿದೆ.

i. ಎಂ.ಎಸ್.ಐ.ಎಲ್ ಸಂಸ್ಥೆಗೆ ತನ್ನ ವಾಣಿಜ್ಯ ಕಾರ್ಯ ಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗದಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಸಿಎಲ್-11ಸಿ ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು.

iii. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹಾ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೇ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

ಸರ್ಕಾರದ ಸುತ್ತೋಲೆಯ ದಿನಾಂಕ:07-10-2020 ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ.

i. ಕರ್ನಾಟಕ ಅಬಕಾರಿ( ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 2ರಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965 ಅನ್ವಯವಾಗುವ ಎಲ್ಲಾ ಸನ್ನದುಗಳಿಗೆ ಸದರಿ ನಿಯಮಗಳು ಅನ್ವಯವಾಗುವುದಾಗಿ ತಿಳಿಸಿರುವುದರಿಂದ ಸದರಿ ನಿಯಮಗಳು ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡುವ ಸನ್ನದುಗಳಿಗೆ ಅನ್ವಯಿಸುತ್ತದೆ.

ii. ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11ಸಿ ಸನ್ನದುಗಾಗಿ ಸಂಸ್ಥೆಯು ನಿರ್ದೇಶಕರ ಮಂಡಳಿಯಿಂದ ಅಧಿಕೃತಗೊಂಡಿರುವ ವ್ಯಕ್ತಿಯ ಮೂಲಕ ಕಡ್ಡಾಯವಾಗಿ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 4 ಹಾಗೂ ನಮೂನೆ ಸಿಎಲ್-1ಎ ರಲ್ಲಿ ನಿಗದಿತ ನಮೂನೆಯಲ್ಲಿ ಘೋಷಣಾ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

iii. ಅರ್ಜಿಯನ್ನು ಸಕ್ಷಮ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು.

**ವೈನ್ ಟ್ಯಾವರ್ನ್**:- ವೈನ್ ಟ್ಯಾವರ್ನ್ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿಯಲ್ಲಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ವೈನ್ ಟ್ಯಾವರ್ನ್ ಸನ್ನದಿನಲ್ಲಿ ಗ್ರಾಹಕರು ಮದ್ಯವನ್ನು ಸೇವಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

**ವೈನ್ ಬೊಟೀಕ್**:- ವೈನ್ ಬೊಟೀಕ್ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿಯಲ್ಲಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ವೈನ್ ಬೊಟೀಕ್ ಸನ್ನದಿನಲ್ಲಿ ಗ್ರಾಹಕರಿಗೆ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಸೀಲ್ ಮಾಡಿದ ಬಾಟಲಿಗಳಲ್ಲಿ ಮಾತ್ರ ಪಾರ್ಸಲ್ ಮೂಲಕ ಮಾರಾಟ ಮಾಡಬಹುದಾಗಿರುತ್ತದೆ.

**ಹೊಂದಿಕೊಂಡಂತೆ ಆರ್.ವಿ.ಬಿ**:- ಕರ್ನಾಟಕ ಅಬಕಾರಿ(ಲೀಸ್ ಆಫ್ ದಿ ರೈಟ್ ಆಫ್ ರಿಟೇಲ್ ವೆಂಡ್ ಆಫ್ ಬಿಯರ್) ನಿಯಮಗಳು, 1976 ರ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9, ಸಿಎಲ್-17 ಮತ್ತು ಸಿಎಲ್-18 ಸನ್ನದುಗಳಿಗೆ ಹೊಂದಿಕೊಂಡಂತೆ ಆರ್.ವಿ.ಬಿ ಸನ್ನದುಗಳನ್ನು

ಮಂಜೂರು ಮಾಡಲಾಗುತ್ತಿದ್ದು, ಸದರಿ ಸನ್ನದುಗಳಲ್ಲಿ ಬಲ್ಕ್ ಬಿಯರ್ ಅನ್ನು ಊಟದೊಂದಿಗೆ ಸೇವಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

**ಮೈಕ್ರೋಬ್ರೀವರಿ:-** ಮೈಕ್ರೋಬ್ರಿವರಿ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಬ್ರೀವರಿ) (ತಿದ್ದುಪಡಿ) ನಿಯಮಗಳು 2010 ರಡಿಯಲ್ಲಿ ರೂಪಿತವಾಗಿರುವ ನಿಯಮಗಳು ಮತ್ತು ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.

ಮುಂದುವರೆದು, ಈ ಎಲ್ಲಾ ಸನ್ನದುಗಳನ್ನು ಮಂಜೂರು ಮಾಡುವಾಗ ಅರ್ಜಿದಾರರುಗಳು ಕರ್ನಾಟಕ ಅಬಕಾರಿ (ದೇಶೀ ಮತ್ತು ವಿದೇಶೀ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4-ಬಿ ಪ್ರಕಾರ ಮತ್ತು ಮೈಕ್ರೊಬ್ರೀವರಿ ಸನ್ನದುಗಳಿಗೆ ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಗಳು 1967 ರ ನಿಯಮ 5-ಬಿ ರನ್ವಯ ಅನರ್ಹರಾಗದಿರುವ ಬಗ್ಗೆ ಸ್ವಯಂಘೋಷಿತ ಮುಚ್ಚಳಿಕೆಯನ್ನು ಪಡೆಯಲಾಗುತ್ತಿದೆ.

**FD/50/ELQ/2026**

## ಅನುಬಂಧ-2

### ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ವಿವರ

| ಕ್ರ.ಸಂ | ಸನ್ನದಿನ ಕ್ರ.ಸಂ | ತಾಲ್ಲೂಕು | ಸನ್ನದುದಾರರ ಹೆಸರು ಹಾಗೂ ಸನ್ನದಿನ ವಿಳಾಸ |
|---|---|---|---|
| **ಸಿಎಲ್-4 ಸನ್ನದು** | | | |
| 1 | 1 | ಸೋಮವಾರಪೇಟೆ | ಹಾನ್ ಸೆಕ್ರೇಟರಿ ಮಾದಾಪುರ ಕ್ಲಬ್ ನಂ.470, ಗರಗಂದೂರು ಗ್ರಾಮ, ಮಾದಾಪುರ, ಸೋಮವಾರಪೇಟೆ ತಾಲ್ಲೂಕು |
| 2 | 2 | ಸೋಮವಾರಪೇಟೆ | ಸಕ್ರೇಟರಿ ಬೆಳೂರು ಕ್ಲಬ್ ಬೇಳೂರು ಕ್ಲಬ್ ನಂ.01, ಬೇಳೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 3 | 3 | ಸೋಮವಾರಪೇಟೆ | ಸಕ್ರೇಟರಿ ಪಯೋನಿಯರ್ ಟೆನಿಸ್ಸ್ ಕ್ಲಬ್ ಪಯೋನಿಯರ್ಸ್ ಟೆನ್ನಿಸ್ ಕ್ಲಬ್ ನಗರೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 4 | 4 | ಸೋಮವಾರಪೇಟೆ | ಪ್ರೆಸಿಡೆಂಟ್ ಪ್ಲಾಂಟರ್ಸ್ ರಿಕ್ರೀಯೇಷನ್ ಅಸೋಸಿಯೇಷನ್ ಕ್ಲಬ್ ಬಿಲ್ಡಿಂಗ್ ನಂ.62 ಬೈಪಾಸ್ ರಸ್ತೆ, ಶನಿವಾರಸಂತೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು |
| 5 | 5 | ಸೋಮವಾರಪೇಟೆ | ಸಕ್ರೇಟರಿ ಚಿಕ್ಕ ಬಸಪ್ಪ ಕ್ಲಬ್ ಚಿಕ್ಕಬಸಪ್ಪ ಕ್ಲಬ್ ಬಸ್ ಸ್ಟ್ಯಾಂಡ್ ಹತ್ತಿರ, ಕ್ಲಬ್ ರಸ್ತೆ, ಸೋಮವಾರಪೇಟೆ ಪಟ್ಟಣ/ತಾಲ್ಲೂಕು |
| 6 | 6 | ಸೋಮವಾರಪೇಟೆ | ಪ್ರೆಸಿಡೆಂಟ್ ಡ್ಯೂಕ್ಸ್ ಕ್ಲಬ್ ಡ್ಯೂಕ್ಸ್ ಕ್ಲಬ್ ಸರ್ವೆ ನಂ.164/2, ಕಟ್ಟಡ ಸಂಖ್ಯೆ:1902/2, ಓಎಲ್‌ವಿ ಕಾನ್ವೆಂಟ್ ರಸ್ತೆ, ಚೌಡ್ಲು ಗ್ರಾಮ, ಸೋಮವಾರಪೇಟೆ ತಾಲ್ಲೂಕು |
| 7 | 7 | ವಿರಾಜಪೇಟೆ | ಗೌರವ ಕಾರ್ಯದರ್ಶಿ ಕೊಡವ ಅಸೋಸಿಯೇಷನ್ ಕ್ಲಬ್, ಸಿಎಲ್-4 ಸನ್ನದುದಾರರು ಡೋರ್ ನಂ: 109, ಸರ್ವೆ ನಂ: 150/6, ಅಮ್ಮತ್ತಿ, ಕಣ್ಣಂಗಾಲ ಗ್ರಾಮ, ವಿರಾಜಪೇಟೆ ತಾಲ್ಲೂಕು |
| 8 | 8 | ವಿರಾಜಪೇಟೆ | ಗೌರವ ಕಾರ್ಯದರ್ಶಿ ಕಲ್ಚರಲ್, ಅಸೋಸಿಯೇಷನ್ಸ್ ಕ್ಲಬ್, ಸಿಎಲ್-4 ಸನ್ನದುದಾರರು, ಡೋರ್ ನಂ : 168, ಪಾಲಿಬೆಟ್ಟ ಗ್ರಾಮ, ವಿರಾಜಪೇಟೆ ತಾಲ್ಲೂಕು. |
| 9 | 9 | ವಿರಾಜಪೇಟೆ | ಅಧ್ಯಕ್ಷರು ವಿಕ್ಟೋರಿಯಾ ರಿಕ್ರಿಯೇಷನ್ ಕ್ಲಬ್, ಸಿಎಲ್-4 ಸನ್ನದುದಾರರು, ಡೋರ್ ನಂ 7-5, ಕಾರು ನಿಲ್ದಾಣದ ಹತ್ತಿರ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು |
| 10 | 10 | ವಿರಾಜಪೇಟೆ | ಗೌರವ ಕಾರ್ಯದರ್ಶಿ ಕೂರ್ಗ್ ಗಾಲ್ಫ್ ಲಿಂಕ್ಸ್ ಸ್ವಿಂಗ್ ಆನೆಕ್ಸ್, ಸರ್ವೆ ನಂ: 171/1, ಅಂಬಟ್ಟಿ ಗ್ರಾಮ, ಬಿಟ್ಟಂಗಾಲ, ವಿರಾಜಪೇಟೆ ತಾಲ್ಲೂಕು |
| 11 | 11 | ವಿರಾಜಪೇಟೆ | ಅಧ್ಯಕ್ಷರು ಕೊಡವ ಸಮಾಜ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್, ಸಿಎಲ್-4 ಸನ್ನದುದಾರರು ಬ್ಲಾಕ್ ನಂ: 12, ಸರ್ವೆ ನಂ: 68(ಎ), ಶಿವಕೇರಿ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು. |
| 12 | 12 | ವಿರಾಜಪೇಟೆ | ಸಕ್ರೆಟರಿ ಬ್ಯಾಂಬೋ ಕ್ಲಬ್, ಸಿಎಲ್-೪ ಸನ್ನದುದಾರರು |
| 13 | 13 | ಮಡಿಕೇರಿ | ಗೌರವಕಾರ್ಯದರ್ಶಿ ನಾರ್ಥ್ ಕೂರ್ಗ್ ಕ್ಲಬ್, ಮಡಿಕೇರಿ ನಗರ |
| 14 | 14 | ಮಡಿಕೇರಿ | ಗೌರವಕಾರ್ಯದರ್ಶಿ ಮರ್ಕರಾ ಗಾಲ್ಫ್ ಕ್ಲಬ್, ಕೆ. ಬಾಡಗ, ಮಡಿಕೇರಿ ತಾಲೂಕು |
| 15 | 15 | ಮಡಿಕೇರಿ | ಗೌರವಕಾರ್ಯದರ್ಶಿ ಕಾಸ್ಮೋಪಾಲಿಟನ್ ಕ್ಲಬ್, ಮಡಿಕೇರಿ |
| 16 | 16 | ಪೊನ್ನಂಪೇಟೆ | ಮ\|\| ಕಾವೇರಿ ಅಸೋಸಿಯೇಷನ್, ಸಿಎಲ್-4 ಸನ್ನದುದಾರರು, ಸರ್ವೆ ನಂ: 82/20, ಕೋಲುಬಾಣೆ, ಬಾಳಾಜಿ ಗ್ರಾಮ, ಮಾಯಮುಡಿ ಅಂಚೆ, ಪೊನ್ನಂಪೇಟೆ ತಾಲ್ಲೂಕು. |
| 17 | 17 | ಪೊನ್ನಂಪೇಟೆ | ಗೌರವ ಕಾರ್ಯದರ್ಶಿ ಬ್ರಹ್ಮಗಿರಿ ಸ್ಪೋರ್ಟ್ಸ್, ಸಿಎಲ್-4 ಸನ್ನದುದಾರರು, ಸರ್ವೆ ನಂ: 103/3, ಕಾಯಿಮನೆ, ಕುಟ್ಟಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 18 | 18 | ಪೊನ್ನಂಪೇಟೆ | ಗೌರವ ಕಾರ್ಯದರ್ಶಿ ಪ್ಲಾಂಟರ್ಸ್ ಕಲ್ಚರಲ್ ಅಸೋಸಿಯೇಷನ್‌ಕ್ಲ ಬ್, ಸಿಎಲ್-4 ಸನ್ನದುದಾರರು, ಡೋರ್ ನಂ: 87, ಕೈಕೇರಿ ಗೋಣಿಕೊಪ್ಪ ಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 19 | 19 | ಪೊನ್ನಂಪೇಟೆ | ಗೌರವ ಕಾರ್ಯದರ್ಶಿ ರಿಫಾರ್ಮರ್ಸ್ ಅಸೋಸಿಯೇಷನ್ ಕ್ಲಬ್, ಸಿಎಲ್-4 ಸನ್ನದುದಾರರು, ಡೋರ್ ನಂ:6/6, ಗೋಣಿಕೊಪ್ಪ ಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 20 | 20 | ಪೊನ್ನಂಪೇಟೆ | ಗೌರವ ಕಾರ್ಯದರ್ಶಿ ಕೂರ್ಗ್ ಸ್ಪೋರ್ಟ್ಸ್, ಸಿಎಲ್-4 ಸನ್ನದುದಾರರು, ಡೋರ್ ನಂ: 165, ಪೊನ್ನಂಪೇಟೆ ಟೌನ್ & ತಾಲ್ಲೂಕು. |
| ಒಟ್ಟು | 20 | | |
| **ಸಿಎಲ್-6A ಸನ್ನದು** | | | |
| 21 | 1 | ವಿರಾಜಪೇಟೆ | ವ್ಯವಸ್ಥಾಪಕ ನಿರ್ದೇಶಕರು ಮ\|\| ರಾಮಪುರಂ ಹಾಲಿಡೇರ್ ಸಾಟ್ಸ್ ಆರೆಂಜ್ ಕೌಂಟಿ, ಸಿಎಲ್- 6ಎ ಸನ್ನದುದಾರರು, ಸರ್ವೆ ನಂ: 14/7 (ಎ), 14/8, 14/17, 14/20, 14/21, 14/23, ಚಿಕ್ಕನಹಳ್ಳಿಗ್ರಾಮ, ಸಿದ್ದಾಪುರ, ವಿರಾಜಪೇಟೆ ತಾಲ್ಲೂಕು |
| 22 | 2 | ಮಡಿಕೇರಿ | ಪೌಲ್ ರೆಸಾರ್ಟ್ ಅಂಡ್ ಹೋಟೆಲ್ಸ್, ಮೇಕೇರಿ ಗ್ರಾಮ, ಮಡಿಕೇರಿ |
| 23 | 3 | ಮಡಿಕೇರಿ | ಕಾವೇರಿ ರಿಟ್ರೀಟ್ಸ್ ಅಂಡ್ ಲಿ.,(ತಾಜ್ ರೆಸರ್ಟ್), ಗಾಳಿಬೀಡು ಗ್ರಾಮ, ಮಡಿಕೇರಿ |
| 24 | 4 | ಮಡಿಕೇರಿ | ತಾಮರ ಲೀಸರ್, ಯವಕಪಾಡಿ ಗ್ರಾಮ, ಮಡಿಕೇರಿ |
| 25 | 5 | ಮಡಿಕೇರಿ | ಜಿ ಪಿ ಸುಧಾಕರ್, ಜಿ ಪಿ ರೆಸರ್ಟ್, ಮಕ್ಕಂದೂರು ಗ್ರಾಮ, ಮಡಿಕೇರಿ ತಾಲೂಕು |
| ಒಟ್ಟು | 5 | | |
| **ಸಿಎಲ್-7 ಸನ್ನದು** | | | |
| 26 | 1 | ಸೋಮವಾರಪೇಟೆ | ಶ್ರೀ ಕ.ಕೆ ಸದಾಶಿವಪ್ಪ ಚೇತನಾ ಬೋರ್ಡಿಂಗ್ ಅಂಡ್ ಲಾಡ್ಜಿಂಗ್ ಸರ್ವೆ ನಂ.73/5, ಪ್ಲಾಟ್ ನಂ.11, ಗುಡುಗಳಲೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು. |
| 27 | 2 | ಸೋಮವಾರಪೇಟೆ | ಆರಟ್ಟು ಹಾಸ್ಪಿಲಿಟಿಸ್ ಪ್ರೈ.ಲಿ ಆಯಾತಾನ್ ರೆಸಾರ್ಟ್ಸ್ ಸರ್ವೆ ನಂ. 1/117, 1/118, 1/119, 1/120, 1/122, 1/123, 1/129, ಕುಮಾರಳ್ಳಿ ಗ್ರಾಮ, ಬೆಟ್ಟದಳ್ಳಿ ಗ್ರಾಮ ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ. |
| 28 | 3 | ಸೋಮವಾರಪೇಟೆ | ಬಿ.ಎಸ್ ಶ್ರೀಧರ್ ಸಫಾಲಿ ಹೋಟೇಲ್ ನಂ v50, ಸರ್ವೆ ನಂ. 197/2(A)& 197(4) ಸೋಮವಾರಪೇಟೆ ಪಟ್ಟಣ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 29 | 4 | ಸೋಮವಾರಪೇಟೆ | ಬಿ.ಎಸ್ ಸುಂದರ್ ಸುವಿಧಾ ಹೋಟೆಲ್ ಡೋರ್ ನಂ ಎನ್-67, ಮುಖ್ಯ ರಸ್ತೆ, ಸೋಮವಾರಪೇಟೆ ಪಟ್ಟಣ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 30 | 5 | ಕುಶಾಲನಗರ | ಶ್ರೀ ಬಿ.ಜಿ ಮಂಜುನಾಥ ಶೈಲಜಾ ಆರ್ಕೆಸ್ ಡೋರ್ ನಂ.1-172, ಸರ್ವೆ ನಂ.85/1ಎ, 85/1ಬಿ, ಐ.ಬಿ ರಸ್ತೆ, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 31 | 6 | ಕುಶಾಲನಗರ | ಡೈರೆಕ್ಟರ್ ವಾಸವಿ ಹೋಟೆಲ್ ಪ್ರೈ.ಲಿ ವಾಸವಿ ಹೋಟೇಲ್ಸ್ ಪ್ರೈ.ಲಿ ನಂ 4/16, ಐ.ಬಿ ರೋಡ್, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 32 | 7 | ಕುಶಾಲನಗರ | ಡಿ.ಕೆ ತಿಮ್ಮಪ್ಪ ಬಿ.ಎಸ್.ಆರ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ. 145/4, 3ನೇ ಬ್ಲಾಕ್, ಬಿ.ಎಂ ರೋಡ್, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಸೋಮವಾರಪೇಟೆ ವಲಯ ಕೊಡಗು ಜಿಲ್ಲೆ. |
| 33 | 8 | ಕುಶಾಲನಗರ | ಶ್ರೀ ಉಮೇಶ್ ಕುಮಾರ್ ಕುಶಾಲ್ ಬಾರ್ & ರೆಸ್ಟೋರೆಂಟ್ ನಂ. 1/238, ಬಿ.ಎಂ ರೋಡ್, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |

## ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ವಿವರ

| ಕ್ರ.ಸಂ | ಸನ್ನದಿನ ಕ್ರ.ಸಂ | ತಾಲ್ಲೂಕು | ಸನ್ನದುದಾರರ ಹೆಸರು ಹಾಗೂ ಸನ್ನದಿನ ವಿಳಾಸ |
|---|---|---|---|
| 34 | 9 | ಕುಶಾಲನಗರ | ಕೆ.ಪಿ ನಾಣಯ್ಯ ಹೋಟೆಲ್ ನ್ಯೂ ಕಾಳೇಘಟ್ ನಂ.153, ಸರ್ವೆ ನಂ. 119/2, ಬಿ.ಎಂ ರೋಡ್, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 35 | 10 | ಕುಶಾಲನಗರ | ಡಿ.ಕೆ ಮಂಜುನಾಥ ಜಂಗಲ್ ಕ್ಯಾಂಪ್ ಬ್ಯಾಕ್ ವಾಟರ್ ರೆಸಾರ್ಟ್ಸ್, ಸರ್ವೆ ನಂ 56, 2ಪಿ2 ಹೇರೂರು ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 36 | 11 | ಕುಶಾಲನಗರ | ಡಿ.ಎಸ್ ಕೊದಂಡರಾಮ ಪರಂಪರ ರೆಸಾರ್ಟ್ಸ್ & ಸ್ಪಾ, ಸರ್ವೆ ನಂ:49, ಪಿ2 & 50, ಹೆಗ್ಗಡಳ್ಳಿ ಗ್ರಾಮ, ಕೂಡಿಗೆ ಗ್ರಾಮ ಪಂಚಾಯಿತಿ ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 37 | 12 | ಕುಶಾಲನಗರ | ಮ್ಯಾನೇಜಿಂಗ್ ಡೈರೆಕ್ಟರ್ ಸಿದ್ಧಾರ್ಥ ರೆಸಾರ್ಟ್ಸ್ & ಫುಡ್ಸ್ ಪ್ರೈ.ಲಿ ನಂ.201/ಪಿ1, ಕೆದಕಲ್ ಗ್ರಾಮ, ಸುಂಟಿಕೊಪ್ಪ ಹೋಬಳಿ, ಕುಶಾಲನಗರ ತಾಲ್ಲೂಕು ಕೊಡಗು ಜಿಲ್ಲೆ. |
| 38 | 13 | ಕುಶಾಲನಗರ | ಗೋಕುಲಂ ರೆಸಾರ್ಟ್ಸ್ ಪ್ಯಾಡಿಂಗ್ಟನ್ ರೆಸಾರ್ಟ್ & ಸ್ಪಾ, ಸರ್ವೆ ನಂ. 90/1, 90/10, ತೊಂಡೂರು ಗ್ರಾಮ, ಸುಂಟಿಕೊಪ್ಪ ಅಂಚೆ, ಕುಶಾಲನಗರ |
| 39 | 14 | ಕುಶಾಲನಗರ | ಎಸ್ ಎಲ್.ಎನ್ ಹೋಟೆಲ್ ಅಂಡ್ ರೆಸಾರ್ಟ್ (ಪರ್ಪಲ್ ಫಾರ್ಮ್) |
| 40 | 15 | ಕುಶಾಲನಗರ | ಮ್ಯಾನೇಜಿಂಗ್ ಡೈರೆಕ್ಟರ್ ಅಮನವನ ರೆಸಾರ್ಟ್ ಅಮನವನ ಕೂರ್ಗ್ ಹಾಲಿಡೇ ರೆಸಾರ್ಟ್ ಸರ್ವೆ ನಂ 54/1, ಬೊಳ್ಳೂರು ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 41 | 16 | ಕುಶಾಲನಗರ | ಶ್ರೀ ಕಾಂತರಾಜ್ ಶ್ರೀ ತೇಜಸ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ. 34/6, (Original Sy No.34/2), ಬೊಳ್ಳೂರು ಗ್ರಾಮ, ಗುಡ್ಡೆಹೊಸೂರು ಪಂಚಾಯಿತಿ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 42 | 17 | ಸೋಮವಾರಪೇಟೆ | ಅಲುಂಪರಂಪಲ ಹೋಮ್ಸ್ ಮತ್ತು ಹೋಟೇಲ್ಸ್ ಪ್ರೈ.ಲಿ ಮೊಂಟ್ರೋಸ್ ಗಾಲ್ಫ್ ರೆಸಾರ್ಟ್ಸ್ & ಸ್ಪಾ, ಸರ್ವೆ ನಂ.52/17, 52/18, ಗರ್ವಾಲೆ ಗ್ರಾಮ, ಸುಂಟಿಕೊಪ್ಪ ಹೋಬಳಿ, ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ. |
| 43 | 18 | ಕುಶಾಲನಗರ | ಬಿ ಎಸ್ ಶಿವಣ್ಣೇಗೌಡ ಡೋರ್ ನಂ. 89/2, ಸರ್ವೆ ನಂ.64/3, ಶಿರಂಗಾಲ ಗ್ರಾಮ, ಕುಶಾಲನಗರ ತಾಲ್ಲೂಕು ಸಾತ್ವಿಕ್ ಬೋರ್ಡಿಂಗ್ & ಲಾಡ್ಜಿಂಗ್ |
| 44 | 19 | ಕುಶಾಲನಗರ | ಕೆ ಎಸ್ ಅರವಿಂದ ಅರವಿಂದ್ ಬೋರ್ಡಿಂಗ್ & ಲಾಡ್ಜಿಂಗ್ ಸರ್ವೆ ನಂ: 16/14, ಬಸವನಹಳ್ಳಿ ಗ್ರಾಮ, ಬೊಳ್ಳೂರು ಗ್ರಾಮ, ಗುಡ್ಡೆಹೊಸೂರು ಪಂಚಾಯಿತಿ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 45 | 20 | ಸೋಮವಾರಪೇಟೆ | ಟಿ ಸಿ ರಮೇಶ ಶುಭೋದಯ ಬಾರ್ ಅಂಡ್ ರೆಸ್ಟೋರೆಂಟ್ ಸರ್ವೆ ನಂ.20/2, ಚೆಂಗಡಳ್ಳಿ ರಸ್ತೆ, ಕಾಜೂರು ಗ್ರಾಮ, ದುಂಡಳ್ಳಿ ಗ್ರಾಮ ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 46 | 21 | ಸೋಮವಾರಪೇಟೆ | ಎಸ್ ವಿ ಜಗದೀಶ್ ದೇವಸ ಬಾರ್ ಅಂಡ್ ರೆಸ್ಟೋರೆಂಟ್ ಸನ್ನದುದಾರರು, ಸರ್ವೆ ನಂ.78/41, ಸ್ವತ್ತಿನ ಸಂಖ್ಯೆ-151800209100200283 ಶನಿವಾರಸಂತೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 47 | 22 | ಕುಶಾಲನಗರ | ಹೆಚ್ ಕೆ ದಿನೇಶ್ ಕಲ್ಪವೃಕ್ಷ ರೆಸಾರ್ಟ್ ಸರ್ವೆ ನಂ.2/62, ಮದಲಾಪುರ ಗ್ರಾಮ, ಕೂಡಿಗೆ ಗ್ರಾಮ ಪಂಚಾಯಿತಿ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 48 | 23 | ಕುಶಾಲನಗರ | ಕೆ ಸುದಾ ಕೆಸಿಟಾ ರೆಸಾರ್ಟ್ ಸರ್ವೆ ನಂ ನಂ.96 ಮತ್ತು 99/2ಪಿ, ಮಾದಪಟ್ಟಣ ಗ್ರಾಮ, ಗುಡ್ಡೆಹೊಸುರು ಗ್ರಾಮ ಪಂಚಾಯಿತಿ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 49 | 24 | ಸೋಮವಾರಪೇಟೆ | ಹೇಮಾಲತ ಸಿ ಹರ್ಷಿತಾ ಬಾರ್ ಅಂಡ್ ರೆಸ್ಟೋರೆಂಟ್ ಸರ್ವೆ ನಂ. 91/1 ವಡಯನಪುರ ಗ್ರಾಮ, ನಿಡ್ತ ಗ್ರಾಮ ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು |
| 50 | 25 | ಕುಶಾಲನಗರ | ಗೋವಿಂದರಾಜ್ ಅರಣ್ಯ ಪದ್ಮಾವತಿ ರೆಸರ್ಟ್ಸ್ & ಸ್ಪಾ, ಸರ್ವೆ ನಂ 69/6, 69/7 ಮತ್ತು 71/3 7ನೇ ಹೊಸಕೋಟೆ ಗ್ರಾಮ, 7ನೇ ಹೊಸಕೋಟೆ ಗ್ರಾಮ ಪಂಚಾಯಿತಿ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 51 | 26 | ಸೋಮವಾರಪೇಟೆ | ಹೆಚ್.ಈ ತಮ್ಮಯ್ಯ ವೈಭವ್ ಬೋರ್ಡಿಂಗ್ & ಲಾಡ್ಜಿಂಗ್ ಸರ್ವೆ ನಂ. 5/57 ಆಲೂರು ಸಿದ್ದಾಪುರ ಗ್ರಾಮ, ಆಲೂರು ಸಿದ್ದಾಪುರ ಗ್ರಾಮ ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು |
| 52 | 27 | ಕುಶಾಲನಗರ | ಹೆಚ್ ಜಿ ಸಂತೋಷ್ ಕುಮಾರ್ ಸಂತೋಷ್ ಬೋರ್ಡಿಂಗ್ ಲಾಡ್ಜಿಂಗ್ ಸರ್ವೆ ನಂ:47/3ಎ, ಹೆಬ್ಬಾಲೆ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 53 | 28 | ಕುಶಾಲನಗರ | ಬಿ ಜಿ ಮಂಜುನಾಥ್ ಕೂರ್ಗ್ ಸ್ಪಿರಿಟ್ ಸರ್ವೆ ನಂ: 85/1, 85/2,85/3,85/1ಎ,85/1ಬಿ, ಸ್ವತ್ತಿನ ಸಂಖ್ಯೆ : 5-501-5, ಬೈಚನಹಳ್ಳಿ, ಐ ಬಿ ರಸ್ತೆ, ಕುಶಾಲನಗರ ಪಟ್ಟಣ/ತಾಲ್ಲೂಕು, ಕೊಡಗು ಜಿಲ್ಲೆ |
| 54 | 29 | ಕುಶಾಲನಗರ | ಪಾಲುದಾರರು ಟಿಂಬರ್ ಟ್ರೈಲ್ಸ್ ಹೋಟೆಲ್ಸ್ ಅಂಡ್ ರೆಸಾರ್ಟ್ ಟಿಂಬರ್ ಟ್ರೈಲ್ಸ್ ಹೋಟೆಲ್ಸ್ ಅಂಡ್ ರೆಸಾರ್ಟ್ ಮೊದೂರು ಗ್ರಾಮ, ಕೆದಕಲ್ ಪಂಚಾಯತ್, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 55 | 30 | ಕುಶಾಲನಗರ | ಶ್ರೀಮತಿ ಎಚ್ ಜಿ ವಿಜಯಲಕ್ಷ್ಮಿ ಎಸ್ ವಿ ಎಸ್ ಬಾರ್ & ರೆಸ್ಟೋರೆಂಟ್ ಸ್ವತ್ತಿನ ನಂ. [illegible] ಸ. ನಂ. [illegible] ಹಾಗೂ ಸ್ವತ್ತಿನ ಸಂ [illegible] ಸ.ನಂ. [illegible] ರ ಉಲುಗುಲಿ ಗ್ರಾಮ, ಸುಂಟಿಕೊಪ್ಪ, ಗ್ರೇಡ್-1 ಗ್ರಾಮ ಪಂಚಾಯಿತಿ, ಕುಶಾಲನಗರ ತಾಲ್ಲೂಕು |
| 56 | 31 | ಕುಶಾಲನಗರ | ಕ್ಯಾಪ್ಟನ್ ಕ್ರೌನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ (ಶ್ರೀ ವಿಜಯ ವಿ ಎಂ )<br>ಕ್ಯಾಪ್ಟನ್ ಕ್ರೌನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್<br>ಸರ್ವೇ.ನಂ.95/*/2 ಮತ್ತು 96/*/2 ರ ಸ್ವತ್ತಿನ ಸಂಖ್ಯೆ:151800206400920367, ಮಾದಾಪಟ್ಟಣ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 57 | 32 | ಸೋಮವಾರಪೇಟೆ | ಶ್ರೀ ಹೆಚ್ ವಿ ಮಿಥುನ್ ಕುಮಾರ್ ಬೃಂದನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂಖ್ಯೆ: 151800205300120420 ರ ಸರ್ವೆ ನಂ:190/*/12, ಚೌಡ್ಲು ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |
| 58 | 33 | ಸೋಮವಾರಪೇಟೆ | ನಗರೂರು ಬೋರ್ಡಿಂಗ್ ಮತ್ತು ಲಾಡ್ಜಿಂಗ್ ( ಧರಣೇಶ್ ಎಸ್ ಮತ್ತು ವಿ ಎ ಅಶ್ವತ್) ಬಳಗುಂದ ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ನಗರೂರು ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂಖ್ಯೆ: 151800204800220038 ರ ಸರ್ವೆ ನಂ:141/*/64, ಬಳಗುಂದ ಗ್ರಾಮ, ನಗರೂರು, ಬೇಳೂರು ಗ್ರಾಮ ಪಂಚಾಯಿತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |
| 59 | 34 | ಕುಶಾಲನಗರ | ರಿಲ್ಯಾಕ್ಸ್ ಸ್ಪಿರಿಟ್ ಪಾಯಿಂಟ್ ಪಾಲುದಾರರು (ಶ್ರೀ ಕೆ ಎಸ್ ದೊರೇಶ ಬಿನ್ ಸುಬ್ಬಯ್ಯ ಮತ್ತು ಶ್ರೀ ಗಂಗಾಧರ ಬಿನ್ ಗಿರಿಗೌಡ) ರಿಲ್ಯಾಕ್ಸ್ ಸ್ಪಿರಿಟ್ ಪಾಯಿಂಟ್ ಪಾಲುದಾರರು ಸ್ವತ್ತಿನ ಸಂಖ್ಯೆ: 151800208600120775 ರ ಸರ್ವೆ ನಂ:51/*/4, ನಲ್ಲಿಹುದಿಕೇರಿ ಗ್ರಾಮ, ಸಿದ್ದಾಪುರ ಮುಖ್ಯ ರಸ್ತೆ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 60 | 35 | ಕುಶಾಲನಗರ | ಶ್ರೀ ಲಕ್ಷ್ಮೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಪಾಲುದಾರರು ( ಶ್ರೀ ಎನ್ ಎಸ್ ಪವನ್ ಕುಮಾರ್ ಮತ್ತು ಪ್ರಶಾಂತ್ ಎಂ ಆರ್) ಶ್ರೀ ಲಕ್ಷ್ಮೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಪಾಲುದಾರರು ಸ್ವತ್ತಿನ ಸಂಖ್ಯೆ ಸಂ:151800204000200302 ಸರ್ವೆ ನಂ:60/*/2, 7ನೇ ಹೊಸಕೋಟೆ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 61 | 36 | ವಿರಾಜಪೇಟೆ | ಶ್ರೀಮತಿ ಶಶಿ ಅಯ್ಯಣ್ಣ, ಸಿಎಲ್-7 ಸನ್ನದುದಾರರು, ಕಟ್ಟಡ ಸಂ:129. ಸರ್ವೇ ನಂ: 130/1 (ಎ), ಗುಹ್ಯಗ್ರಾಮ, ಸಿದ್ದಾಪುರ, ವಿರಾಜಪೇಟೆ ತಾಲ್ಲೂಕು |
| 62 | 37 | ವಿರಾಜಪೇಟೆ | ಮೆ\|\| ಮಹೀಂದ್ರಹಾಲಿಡೇಸ್ ಆ್ಯ ರೆಸಾರ್ಟ್ಸ್ ಇಂಡಿಯಾಲಿ ಮಿಟೆಡ್, ಸಿಎಲ್-7 ಸನ್ನದುದಾರರು, ಸರ್ವೇನಂ: 54/37, 50/2 ಪಾಲಂಗಾಲಗ್ರಾಮ, ಕರಡ ಅಂಚೆ, ವಿರಾಜಪೇಟೆ ತಾಲ್ಲೂಕು |
| 63 | 38 | ವಿರಾಜಪೇಟೆ | ಮೆ\|\| ವೈಕಿಂಗ್ ರೆಸಾರ್ಟ್ಸ್ ಲಿಮಿಟೆಡ್, ಸಿಎಲ್-7 ಸನ್ನದುದಾರರು, ಸರ್ವೇ ನಂ:117/3, ಅಂಬಟ್ಟಿ ಗ್ರಾಮ, ಬಿಟ್ಟಂಗಾಲ ಅಂಚೆ, ವಿರಾಜಪೇಟೆ ತಾಲ್ಲೂಕು |
| 64 | 39 | ವಿರಾಜಪೇಟೆ | ಮೆ\|\| ಕಡ್‌ಕಾಣಿ ರೆಸಾರ್ಟ್ಸ್, ಸಿಎಲ್-7 ಸನ್ನದುದಾರರು, ಸರ್ವೇನಂ: 79/2, ಹಚ್ಚಿನಾಡು ಗ್ರಾಮ, ಅಮ್ಮತ್ತಿ ಕಣ್ಣಂಗಾಲ, ವಿರಾಜಪೇಟೆ ತಾಲ್ಲೂಕು |
| 65 | 40 | ವಿರಾಜಪೇಟೆ | ಮೆ\|\| ಕಾಂಟಿನೆಂಟಲ್ ಕೆಫೆ, ಸಿಎಲ್-7 ಸನ್ನದುದಾರರು, ನಂ: 14, ಸರ್ವೇನಂ: 7/2, ಮಲಬಾರ್ ರಸ್ತೆ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು. |

## ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ವಿವರ

| ಕ್ರ.ಸಂ | ಸನ್ನದಿನ ಕ್ರ.ಸಂ | ತಾಲ್ಲೂಕು | ಸನ್ನದುದಾರರ ಹೆಸರು ಹಾಗೂ ಸನ್ನದಿನ ವಿಳಾಸ |
|---|---|---|---|
| 66 | 41 | ವಿರಾಜಪೇಟೆ | ಶ್ರೀಕೆ. ಎಸ್. ಜಗದೀಶ್, ಸಿಎಲ್-7 ಸನ್ನದುದಾರರು, ಟ್ರೈಟಾನಿಕ್ ಬಾರ್ ಅಂಡ್ ರೆಸ್ಟೋರೆಂಟ್, ಅಮ್ಮತ್ತಿಗ್ರಾಮ, ವಿರಾಜಪೇಟೆತಾಲ್ಲೂಕು |
| 67 | 42 | ವಿರಾಜಪೇಟೆ | ಶ್ರೀ ಕೆ ಬಿ ಶಾಂತಪ್ಪ ಸಿಎಲ್-7 ಸನ್ನದುದಾರರು ಸರ್ವೆ. ನಂ 66/1, 66/2A, 67/1, 66/2 ಮತ್ತು 67/2 ರ ಬೋರೆಗೌಡ ಕಾಂಪ್ಲೆಕ್ಸ್, ಎಫ್.ಎಂ.ಸಿರಸ್ತೆ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |
| 68 | 43 | ವಿರಾಜಪೇಟೆ | ಶ್ರೀ ಕಿರಣ್ ಜೊಯಪ್ಪ ಸಿಎಲ್-7 ಸನ್ನದುದಾರರು, ಆಸ್ತಿ ಸಂಖ್ಯೆ:151800300400120239, ಸರ್ವೆ ನಂ:282/4, ಬಿಟ್ಟಂಗಾಲ ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |
| 69 | 44 | ಮಡಿಕೇರಿ | ಶ್ರೀಮತಿ ಎ.ಕೆ.ಪೊನ್ನಮ್ಮ, ಕಾವೇರಿ ಬಾರ್, ನಾಪೋಕ್ಲು. |
| 70 | 45 | ಮಡಿಕೇರಿ | ಗೇಟ್ ವೇ, ಕರಿಕೆ |
| 71 | 46 | ಮಡಿಕೇರಿ | ಶ್ರೀ ಬಿ.ಎಂ.ಸುರೇಶ್, ಸುರಭಿ ಬಾರ್, ಮಡಿಕೇರಿ. |
| 72 | 47 | ಮಡಿಕೇರಿ | ಕಾವೇರಿ ಇನ್, ಕರಿಕೆ. |
| 73 | 48 | ಮಡಿಕೇರಿ | ಶ್ರೀ ಪುಷ್ಪರಾಜ್ ಅಶೋಸಿಯೇಷನ್ ಹೋಟೆಲ್ ರಾಜ ದರ್ಶನ್, ಮಡಿಕೇರಿ. |
| 74 | 49 | ಮಡಿಕೇರಿ | ಎ. ಆರ್ ವೆಂಚರ್ಸ್, ಮಂಗಳೂರು ರಸ್ತೆ, ಮಡಿಕೇರಿ ನಗರ |
| 75 | 50 | ಮಡಿಕೇರಿ | ಪಾಲುದಾರರು, ಸ್ನೋ ಹಾಸ್ಪಿಟಾಲಿಟಿ, ಗಾಳಿಬೀಡು, ಮಡಿಕೇರಿ |
| 76 | 51 | ಮಡಿಕೇರಿ | ಶ್ರೀ ಡಿ. ಎ. ಸಬಾಸ್ಟಿನ್, ಇಬ್ನಿ ಸ್ಪಾ ರೆಸಾರ್ಟ್ ಇಬ್ನಿವಳವಾಡಿ ಗ್ರಾಮ, ಮಡಿಕೇರಿ |
| 77 | 52 | ಮಡಿಕೇರಿ | ಮಹೀಂದ್ರ ಹಾಲಿಡೇಸ್ ಅಂಡ್ ರೆಸಾರ್ಟ್ ಇಂಡಿಯಾ ಲಿ., ಗಾಳಿಬೀಡು, ಮಡಿಕೇರಿ |
| 78 | 53 | ಮಡಿಕೇರಿ | ಸುನೀಲ್ ಮೋಲ್ ಘೋಷ್, ಹೆರಿಟೇಜ್ ರೆಸರ್ಟ್, ಮೊಣ್ಣಗೇರಿ ಗ್ರಾಮ |
| 79 | 54 | ಮಡಿಕೇರಿ | ಎನ್ ಓ. ಮ್ಯಾಥ್ಯೂ, ಓಬಾ ಬಾರ್, ಕಾಂತೂರು-ಮರ್ನಾಡು |
| 80 | 55 | ಮಡಿಕೇರಿ | ಎ ಎಂ ಪೊನ್ನಪ್ಪ, ಹೋಟೆಲ್ ಚರ್ಚ್ ಸೈಡ್, ದೇವಸ್ಥಾನ ರಸ್ತೆ,ಮಡಿಕೇರಿ ನಗರ |
| 81 | 56 | ಮಡಿಕೇರಿ | ಪಿ ಟಿ ಉಣ್ಣಿಕೃಷ್ಣನ್, ಆಕ್ಸಿರಿಚ್, ತಾಳತ್ಮನೆ, ಮಡಿಕೇರಿ ತಾಲೂಕು |
| 82 | 57 | ಮಡಿಕೇರಿ | ಎಂ ಡಿ ಸರೋಜ, ದಿ ರೋವ್, ನಾಪೋಕ್ಲು ಗ್ರಾಮ, ಮಡಿಕೇರಿ ತಾಲೂಕು |
| 83 | 58 | ಪೊನ್ನಂಪೇಟೆ | ಮೆ\| ಗ್ರೀನ್ ಫೀಲ್ಡ್ ರೆಸಾರ್ಟ್ಸ್, ಸಿಎಲ್-7 ಸನ್ನದುದಾರರು, ಸರ್ವೆ ನಂ: 103-ಎ/37, ಬಾಳಾಜಿ ಗ್ರಾಮ ಮಾಯಮುಡಿ ಅಂಚೆ, ಪೊನ್ನಂಪೇಟೆ ತಾಲ್ಲೂಕು |
| 84 | 59 | ಪೊನ್ನಂಪೇಟೆ | ಮೆ\|\| ನಂದನವನ ರೆಸಾರ್ಟ್ಸ್, ಸಿಎಲ್-7 ಸನ್ನದುದಾರರು, ಗೋಣಿಕೊಪ್ಪ ಗ್ರಾಮ, ಪೊನ್ನಂಪೇಟೆ ತಾಲ್ಲೂಕು |
| 85 | 60 | ಪೊನ್ನಂಪೇಟೆ | ಮೆ\|\| ದೊಡ್ಡಮಾಡ್ ರೆಸಿಡೆನ್ಸಿ, ಸಿಎಲ್-7 ಸನ್ನದುದಾರರು, ಗೋಣಿಕೊಪ್ಪ ಗ್ರಾಮ, ಪೊನ್ನಂಪೇಟೆ ತಾಲ್ಲೂಕು |
| 86 | 61 | ಪೊನ್ನಂಪೇಟೆ | ಶ್ರೀಸಿಎಸ್ ಮಿತ್ರಾ, ಸಿಎಲ್- 7 ಸನ್ನದುದಾರರು, ಟಿ. ಶೆಟ್ಟಿಗೇರಿಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 87 | 62 | ಪೊನ್ನಂಪೇಟೆ | ದುರ್ಗಾಬೋಜಿ ಗ್ರಾಂಡ್ ಸಿಎಲ್- 7 ಸನ್ನದುದಾರರು, ಗೋಣಿಕೊಪ್ಪ ಟೌನ್, ಪೊನ್ನಂಪೇಟೆ ತಾಲ್ಲೂಕು |
| 88 | 63 | ಪೊನ್ನಂಪೇಟೆ | ಮೆ\|\| ಎಸ್.ಪಿಎಂಟರ್‌ಪ್ರೈಸಸ್ ಸಿಎಲ್- 7 ಸನ್ನದುದಾರರು (ಪಾಲುದಾರರು:ಶ್ರೀಮತಿ ಎಂ ಎನ್ ಶ್ವೇತಾ, ಶ್ರೀಮತಿ ಪ್ರತೀಮ ಆರ್. ಕಮಲೇಶ್ ಕುಮಾರ್ ಮತ್ತು ಹೆಚ್ ಯು ಮಣಿಕಂಠ) ಇವರು ಶ್ರೀ ಪ್ರಭಾಕರನ್ ಪಿ ರವರ ಮಾಲೀಕತ್ವಕ್ಕೆ ಸೇರಿದ ಸರ್ವೆ ನಂ.201/7 ಮತ್ತು 201/8, ಅರ್ವತ್ತೊಕ್ಲುಗ್ರಾಮ, ಗೋಣಿಕೊಪ್ಪ, ಪೊನ್ನಂಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |
| ಒಟ್ಟು | 63 | | |
| | | ಸಿಎಲ್-9 ಸನ್ನದು | |
| 89 | 1 | ಕುಶಾಲನಗರ | ಬಿ ಎಸ್ ವರದ ಗಣೇಶ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.178/1ಎ18, ಕಟ್ಟಡ ಸಂಖ್ಯೆ:ಎಸ್‌ಜಿಪಿಟಿ 91(ಂ), ಹಳೆ ನಂ 1-66(9), ಮುಖ್ಯ ರಸ್ತೆ, ಸುಂಟಿಕೊಪ್ಪ ಗ್ರಾಮ, ಕುಶಾಲನಗರ ತಾಲ್ಲೂಕು. |
| 90 | 2 | ಕುಶಾಲನಗರ | ಶ್ರೀ ರಾಜೀವ್ ಗೋಲ್ಡ್ ಫಿಂಗರ್ ಬಾರ್ & ರೆಸ್ಟೋರೆಂಟ್ ಸರ್ವೆ 82/1 ಡೋರ್ ನಂ 222/2, ಗುಮ್ಮನಕೊಲ್ಲಿ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 91 | 3 | ಕುಶಾಲನಗರ | ಸಿ.ಪಿ ಜೆಮ್ಮಿ ಪೊನ್ನಪ್ಪ ವೈಭವ್ ಬಾರ್ & ರೆಸ್ಟೋರೆಂಟ್, ಸರ್ವೆ ನಂ 50/2ಪಿ2 ಬೈಚನಹಳ್ಳಿ, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು |
| 92 | 4 | ಕುಶಾಲನಗರ | ಎಂ.ಎಂ ದೇವಯ್ಯ ಮೇ ಫ್ಲವರ್ ಬಾರ್ & ರೆಸ್ಟೋರೆಂಟ್ ನಂ. 29, 2ನೇ ಬ್ಲಾಕ್, ಬಿ.ಎಂ ರಸ್ತೆ, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು. |
| 93 | 5 | ಕುಶಾಲನಗರ | ಕೆ ಸಿ ನಾಣಯ್ಯ ಕಾಳೇಘಟ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.56/2, 58/2, 3ನೇ ಬ್ಲಾಕ್, ತ್ಯಾಗರಾಜ್ ರಸ್ತೆ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 94 | 6 | ಕುಶಾಲನಗರ | ಆರ್ ಬಾಬು ಬಿ.ಎಸ್.ಆರ್ ಗಾರ್ಡನ್ ಬಾರ್ & ರೆಸ್ಟೋರೆಂಟ್ ಡೋರ್ ನಂ.5, ಬೈಚನಹಳ್ಳಿ, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 95 | 7 | ಕುಶಾಲನಗರ | ಟಿ. ಡಿ ಅರ್ಜುನ ಗುರುರಾಘವೇಂದ್ರ ಬಾರ್ & ರೆಸ್ಟೋರೆಂಟ್ ಸರ್ವೆ ನಂ 20/1, 1/4, ಸ್ವತ್ತಿನ ಸಂಖ್ಯೆ: 151800208101100033, ಬಸವನತ್ತೂರು ಗ್ರಾಮ, ಕೂಡುಮಂಗಳೂರು, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 96 | 8 | ಕುಶಾಲನಗರ | ಗೋವಿಂದರಾಜು ವೆಂಕಟೇಶ್ವರ ಬಾರ್ & ರೆಸ್ಟೋರೆಂಟ್, ಸರ್ವೆ ನಂ 3/66, ಸಂತೆಮಾಳ ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 97 | 9 | ಕುಶಾಲನಗರ | ಶ್ರೀಮತಿ ಸುನೀತಾ ಮಹೇಶ್ ಕುಮಾರ್ ಸರೋವರ ಬಾರ್ & ರೆಸ್ಟೋರೆಂಟ್ ಸರ್ವೆ ನಂ.60/20, ಮುಳ್ಳುಸೋಗೆ ಗ್ರಾಮ, ಕುಶಾಲನಗರ ಪಟ್ಟಣ, ಕುಶಾಲನಗರ ತಾಲ್ಲೂಕು |
| 98 | 10 | ಕುಶಾಲನಗರ | ಯು.ಸಿ ಮನೋಜ್‌ಕುಮಾರ್ ಶ್ರೀ ದೇವಿ ಬಾರ್ & ರೆಸ್ಟೋರೆಂಟ್, ಸರ್ವೆ ನಂ. 8/2ಪಿ1 ಮತ್ತು 8/3, ಹಾರಂಗಿ ರಸ್ತೆ, ಮುಳ್ಳುಸೋಗೆ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 99 | 11 | ಕುಶಾಲನಗರ | ದೊಡ್ಡಮ್ಮ ಹರೀಶ್ ಬಾರ್ & ರೆಸ್ಟೋರೆಂಟ್ ಡೋರ್ ನಂ.39/1, ಕೂಡುಮಂಗಳೂರು ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 100 | 12 | ಕುಶಾಲನಗರ | ಎಸ್.ಎಸ್ ಶಿವಪ್ಪ ಪ್ಲುಧಿ ಷವರ್ ಬಾರ್ & ರೆಸ್ಟೋರೆಂಟ್ ನಂ 11/57, ಮುಖ್ಯ ರಸ್ತೆ, ಕೂಡಿಗೆ ಗ್ರಾಮ, ಕುಶಾಲನಗರ ತಾಲ್ಲೂಕು. |
| 101 | 13 | ಕುಶಾಲನಗರ | ಶ್ರೀಮತಿ ಎಚ್ ಜೆ ಸರಸ್ವತಿ ಸಂತೋಷ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.45/6, ಐಗೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |

## ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ವಿವರ

| ಕ್ರ.ಸಂ | ಸನ್ನದಿನ ಕ್ರ.ಸಂ | ತಾಲ್ಲೂಕು | ಸನ್ನದುದಾರರ ಹೆಸರು ಹಾಗೂ ಸನ್ನದಿನ ವಿಳಾಸ |
|---|---|---|---|
| 102 | 14 | ಕುಶಾಲನಗರ | ರವಿ ಬಿನ್ ಕುಳ್ಳೇಗೌಡ ಗಂಧರ್ವ ಬಾರ್ & ರೆಸ್ಟೋರೆಂಟ್ ಸರ್ವೆ ನಂ.32/4, ಶಿರಂಗಾಲ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 103 | 15 | ಕುಶಾಲನಗರ | ಬಿ.ಎಸ್ ಶಿವಣ್ಣೇಗೌಡ ಸಂತೋಷ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.35/2, ಶಿರಂಗಾಲ ಗ್ರಾಮ, ಕುಶಾಲನಗರ ತಾಲ್ಲೂಕು. ಸೋಮವಾರಪೇಟೆ ವಲಯ ಕೊಡಗು ಜಿಲ್ಲೆ. |
| 104 | 16 | ಕುಶಾಲನಗರ | ಎನ್ ಮಹೇಶ್ ಕುಮಾರ್ ಭೀಮಾಸ್ ಬಾರ್ & ರೆಸ್ಟೋರೆಂಟ್ ಡೋರ್ ನಂ.25/2, ಮೈಸೂರು - ಮಡಿಕೇರಿ ಮುಖ್ಯ ರಸ್ತೆ, ಗುಡ್ಡೆಹೊಸೂರು ಗ್ರಾಮ, ಕುಶಾಲನಗರ ತಾಲ್ಲೂಕು |
| 105 | 17 | ಕುಶಾಲನಗರ | ಶ್ರೀ ಎಸ್.ಎ ಮಂಜು ಲಕ್ಷ್ಮೀ ಬಾರ್ & ರೆಸ್ಟೋರೆಂಟ್ ನಂ.64, ಮೈಸೂರು - ಮಡಿಕೇರಿ ಮುಖ್ಯ ರಸ್ತೆ, ಗುಡ್ಡೆಹೊಸೂರು ಗ್ರಾಮ, ಕುಶಾಲನಗರ ತಾಲ್ಲೂಕು, |
| 106 | 18 | ಕುಶಾಲನಗರ | ಪಿ.ಎಸ್ ಡೀಸಮ್ಮ ವಂದನಾ ಬಾರ್ & ರೆಸ್ಟೋರೆಂಟ್ ಸರ್ವೆ ನಂ. 155/ಪಿ1, ಡೋರ್ ನಂ.5ಜಿಪಿ255(೨), ಉಲುಗುಲಿ ಗ್ರಾಮ, ಗದ್ದೆಹಳ್ಳ, ಸುಂಟಿಕೊಪ್ಪ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 107 | 19 | ಕುಶಾಲನಗರ | ಶ್ರೀ ಕೆ.ಪಿ ಬೋಪಯ್ಯ ಪೂಜಾ ಬಾರ್ & ರೆಸ್ಟೋರೆಂಟ್ ನಂ. ಎಸ್‌ಜಿಪಿಟಿ 157, ಬಿ.ಎಂ ರಸ್ತೆ, ಸುಂಟಿಕೊಪ್ಪ ಗ್ರಾಮ, ಕುಶಾಲನಗರ ತಾಲ್ಲೂಕು ಕೊಡಗು ಜಿಲ್ಲೆ. |
| 108 | 20 | ಕುಶಾಲನಗರ | ಕೆ.ಬಾಲಯ್ಯ ಸ್ವಾಗತ್ ಬಾರ್ & ರೆಸ್ಟೋರೆಂಟ್ ಡೋರ್ ನಂ.56/2, ಮುಖ್ಯ ರಸ್ತೆ, ಸುಂಟಿಕೊಪ್ಪ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 109 | 21 | ಕುಶಾಲನಗರ | ನಂದಿನಿ ಬಾರ್ ಅಂಡ್ ರೆಸ್ಟೋರೆಂಟ್ ನಂದಿನಿ ಬಾರ್ & ರೆಸ್ಟೋರೆಂಟ್ ಸರ್ವೆ ನಂ.144/12, ಡೋರ್ ನಂ.726, ನೆಲ್ಲಿಹುದಿಕೇರಿ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 110 | 22 | ಕುಶಾಲನಗರ | ಮಿಲೇನಿಯಂ ವೈನ್ಸ್ ಮಿಲೇನಿಯಂ ವೈನ್ಸ್ ನಂ.8/1ಎ2, ಸಿದ್ದಲಿಂಗಪುರ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. |
| 111 | 23 | ಸೋಮವಾರಪೇಟೆ | ಸುನೀತಾ ಹೈ ಸ್ಪಿರಿಟ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.8/3, ಹಿತ್ತಲಮಕ್ಕಿ ಗ್ರಾಮ, ಅಬ್ಬೂರುಕಟ್ಟೆ ಅಂಚೆ, ಸೋಮವಾರಪೇಟೆ ತಾಲ್ಲೂಕು |
| 112 | 24 | ಸೋಮವಾರಪೇಟೆ | ಎನ್ ಆರ್ ಸಂಜೋಗ್ ಎನ್.ಬಿ.ಆರ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.62/2, ಸಿ.ಟಿ ಸರ್ವೆ ನಂ.394/2, ಶನಿವಾರಸಂತೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ. |
| 113 | 25 | ಸೋಮವಾರಪೇಟೆ | ರಾಜಶ್ರೀ ಸದಾನಂದ ಆಲೋಕ ಬಾರ್ & ರೆಸ್ಟೋರೆಂಟ್ ನಂ.25, ಕ್ಲಬ್ ರಸ್ತೆ, ಸೋಮವಾರಪೇಟೆ ಪಟ್ಟಣ ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |
| 114 | 26 | ಸೋಮವಾರಪೇಟೆ | ಎನ್ ಮಹೇಶ್ ಕುಮಾರ್ ಎಸ್.ಎಲ್‌ಎನ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.7/30, ಕೋಣಿಗನಹಳ್ಳಿ, ಬೆಸೂರು ಗ್ರಾಮ ಪಂಚಾಯತ್, ಸೋಮವಾರಪೇಟೆ ತಾಲ್ಲೂಕು |
| 115 | 27 | ಸೋಮವಾರಪೇಟೆ | ಶ್ರೀಮತಿ ಪೂಜಾ ತಿಮ್ಮಯ್ಯ ರಿವರ್ ಸೈಡ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.೯/೪ಬಿ, ಡೋರ್ ನಂ.೧೮( ಹಳೆ ನಂ ಬಿ-೩೫), ಮಾದಾಪುರ ಗ್ರಾಮ, ಸೋಮವಾರಪೇಟೆ ತಾಲ್ಲೂಕು |
| 116 | 28 | ಸೋಮವಾರಪೇಟೆ | ಬಿ.ಎಸ್ ಸುಂದರ್ ಟಿಕ್ಕಾ ಬಾರ್ & ರೆಸ್ಟೋರೆಂಟ್ ಕಟ್ಟಡ ಸಂಖ್ಯೆ:33/ಎ, ಸಿ.ಕೆ.ಸುಬ್ಬಯ್ಯ ರಸ್ತೆ, ಸೋಮವಾರಪೇಟೆ ಪಟ್ಟಣ, ಸೋಮವಾರಪೇಟೆ ತಾಲ್ಲೂಕು |
| 117 | 29 | ಸೋಮವಾರಪೇಟೆ | ಶ್ರೀ ಎನ್.ಎಂ ಧನಂಜಯ ಆದರ್ಶ ಬಾರ್ & ರೆಸ್ಟೋರೆಂಟ್ ನಂ.36, ಮುಖ್ಯ ರಸ್ತೆ, ಸೋಮವಾರಪೇಟೆ ಪಟ್ಟಣ, ಸೋಮವಾರಪೇಟೆ ತಾಲ್ಲೂಕು |
| 118 | 30 | ಸೋಮವಾರಪೇಟೆ | ಎ.ಎ ಪರಮೇಶ್ ಎ.ಎಂ.ಎಲ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ.396, ಶನಿವಾರಸಂತೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ. |
| 119 | 31 | ಸೋಮವಾರಪೇಟೆ | ಎಸ್.ಎಂ ಉಮಾಸುತ ಸಾಗರ್ ಬಾರ್ & ರೆಸ್ಟೋರೆಂಟ್ ಸೈಟ್ ನಂ.78-37, ಬಿದರೂರು ಲೇನ್, ಶನಿವಾರಸಂತೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು |
| 120 | 32 | ಸೋಮವಾರಪೇಟೆ | ಹೆಚ್ ಬಿ ರುಕ್ಮಿಣಿ ಎಸ್.ಎಲ್.ಎನ್ ಬಾರ್ & ರೆಸ್ಟೋರೆಂಟ್ ಸರ್ವೆ ನಂ. 294/3, ದೊಡ್ಡಕೊಡ್ಲಿ ಗ್ರಾಮ, ಕೊಡ್ಲಿಪೇಟೆ, ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ. |
| 121 | 33 | ಕುಶಾಲನಗರ | ಅನಿತಾ ಸಿ. ಜಿ.ಸಿ ಕೆ ಶ್ರೇಯಸ್ ಬಾರ್ & ರೆಸ್ಟೋರೆಂಟ್, ಸರ್ವೆ ನಂ. 29/5 ನಂಜರಾಯಪಟ್ಟಣ ಗ್ರಾಮ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 122 | 34 | ಸೋಮವಾರಪೇಟೆ | ಶ್ರೀ ಎಂ ಪಿ ಮಹೇಶ್ ಕಾವೇರಿ ಬಾರ್ ಬಿನ್ ಲೇಟ್ ಪುಟ್ಟೇಗೌಡ, ಗುಂಡುರಾವ್ ಬಡಾವಣೆ ಕುವೆಂಪು ರಸ್ತೆ, ಬಿದರೂರು ಶನಿವಾರಸಂತೆ ಗ್ರಾಮ ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ |
| 123 | 35 | ವಿರಾಜಪೇಟೆ | ಶ್ರೀಮತಿ ಎಂ. ಕೆ. ಪಾರ್ವತಿ, ಸಿಎಲ್-9 ಸನ್ನದುದಾರರು, ಡೋರ್ ನಂ: 4, ಬ್ಲಾಕ್ ನಂ: 6, ಖಾಸಗಿ ಬಸ್ ನಿಲ್ದಾಣ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು. |
| 124 | 36 | ವಿರಾಜಪೇಟೆ | ಶ್ರೀಕೆ. ಎಸ್. ಜಗದೀಶ್, ಸಿಎಲ್-9 ಸನ್ನದುದಾರರು, ಸರ್ವೆ ನಂ: 150/2, ಕಣ್ಣಂಗಾಲ ಗ್ರಾಮ, ಅಮ್ಮತ್ತಿ, ವಿರಾಜಪೇಟೆತಾಲ್ಲೂಕು. |
| 125 | 37 | ವಿರಾಜಪೇಟೆ | ಮೆ॥ ಕೊಡಗು ರಿಟೇಲ್ಸ್ ಪ್ರೈ ಲಿಮಿಟೆಡ್, ಸಿಎಲ್-9 ಸನ್ನದುದಾರರು, ಸರ್ವೆ ನಂ:26/13, ಸಿದ್ದಾಪುರ ಗ್ರಾಮ, ಅಮ್ಮತ್ತಿ ಹೋಬಳಿ, ವಿರಾಜಪೇಟೆ ತಾಲ್ಲೂಕು |
| 126 | 38 | ವಿರಾಜಪೇಟೆ | ಶ್ರೀಮತಿ ಎನ್ ಜಿಶುಭಾ, ಸಿಎಲ್-9 ಸನ್ನದುದಾರರು, ಕಟ್ಟಡ ಸಂಖ್ಯೆ: 7, ಬ್ಲಾಕ್ ನಂ: 7, ಸರ್ವೆ ನಂ:8/1 ಮತ್ತು 8/2, ಮಲಬಾರ್ ರಸ್ತೆ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು. |
| 127 | 39 | ವಿರಾಜಪೇಟೆ | ಶ್ರೀ ಎಂ. ಸಿ. ಮಾದಯ್ಯ, ಸಿಎಲ್-9 ಸನ್ನದುದಾರರು, ಡೋರ್ ನಂ: 7/666 (1) ಕಾರು ನಿಲ್ದಾಣದ ಹತ್ತಿರ, ವಿರಾಜಪೇಟೆ ಟೌನ್, ವಿರಾಜಪೇಟೆ ತಾಲ್ಲೂಕು. |
| 128 | 40 | ವಿರಾಜಪೇಟೆ | ಮೆ\|\| ಕರಾವಳಿ ಪ್ರಿನ್ಸ್ ಬಾರ್ ಅಂಡ್ ರೆಸ್ಟೋರೆಂಟ್, ಸಿಎಲ್-9 ಸನ್ನದುದಾರರು, ಡೋರ್ ನಂ: 155/2, ಸಿದ್ದಾಪುರ ಗ್ರಾಮ ವಿರಾಜಪೇಟೆ ತಾಲ್ಲೂಕು |
| 129 | 41 | ಮಡಿಕೇರಿ | ಶ್ರೀಪಿ.ಸಿ.ತಮ್ಮಯ್ಯ ವೆಸ್ಟ್ ಎಂಡ್ ಬಾರ್/, ಮಡಿಕೇರಿ. |
| 130 | 42 | ಮಡಿಕೇರಿ | ಶ್ರೀ ಬಿ.ವಿ.ರೋಷನ್, ಮಾರುತಿ ಬಾರ್ ಮಡಿಕೇರಿ. |
| 131 | 43 | ಮಡಿಕೇರಿ | ಶ್ರೀಮತಿ ಬಿ.ಎಸ್.ವರದ, ಸಂಗಂ ಬಾರ್, ಭಾಗಮಂಡಲ |
| 132 | 44 | ಮಡಿಕೇರಿ | ಮೆ//ಕೊಡಗು ರಿಟೈಲ್ಸ್ ಪ್ರೈವೇಟ್ ಲಿಮಿಟೆಡ್, ದೇವಸ್ಥಾನ ರಸ್ತೆ ಮಡಿಕೇರಿ. |
| 133 | 45 | ಮಡಿಕೇರಿ | ಶ್ರೀ ಬಿ.ಎಸ್.ಕುಟ್ಟಪ್ಪ, ನದೀಸಾ ಬಾರ್& ರೆಸ್ಟೋರೆಂಟ್,ಚೆಯ್ಯಂಡಾಣೆ |
| 134 | 46 | ಮಡಿಕೇರಿ | ಶ್ರೀಎ.ಎಂ, ಸುಬ್ಬಯ್ಯ, ಸುಗುಣ ಬಾರ್, ಕಾಂತೂರು ಮರ್ನಾಡು. |
| 135 | 47 | ಮಡಿಕೇರಿ | ಮೆ// ಕೊಡಗು ರಿಟೈಲ್ಸ್ ಪ್ರೈವೇಟ್ ಲಿಮಿಟೆಡ್, ನಾಪೋಕ್ಲು. |
| 136 | 48 | ಮಡಿಕೇರಿ | ಶ್ರೀ ಮಂಜುನಾಥ್, ಕಾವೇರಿ ಬಾರ್ ಮಾರ್ಕೆಟ್ ಹತ್ತಿರ, ಮಡಿಕೇರಿ |
| 137 | 49 | ಮಡಿಕೇರಿ | ಶ್ರೀ ಕೆ.ಬಿ.ಸುಬ್ಬಯ್ಯ, ಈಸ್ಟ್ ಎಂಡ್ ಬಾರ್ ಮಡಿಕೇರಿ. |
| 138 | 50 | ಮಡಿಕೇರಿ | ಶ್ರೀ ಎಸ್.ಮಹೇಶ್ ಕುಮಾರ್, ಸುರಾ ಬಾರ್, ನಾಪೋಕ್ಲು, ಮಡಿಕೇರಿ. |
| 139 | 51 | ಮಡಿಕೇರಿ | ಗೋಲ್ಡನ್ ಬಾ/ರ, ಕರಿಕೆ ಗ್ರಾಮ |

## ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ವಿವರ

| ಕ್ರ.ಸಂ | ಸನ್ನದಿನ ಕ್ರ.ಸಂ | ತಾಲ್ಲೂಕು | ಸನ್ನದುದಾರರ ಹೆಸರು ಹಾಗೂ ಸನ್ನದಿನ ವಿಳಾಸ |
|---|---|---|---|
| 140 | 52 | ಮಡಿಕೇರಿ | ಪೃಥ್ವಿರಾಜ್ ಅಸೋಸಿಯೇಟ್ಸ್, ದಿ ಫೋರ್ಟ್ ಮರ್ಕರಾ ಕೊಡವ ಸಮಾಜ ಕಾಂಪ್ಲೆಕ್ಸ್, ಮಡಿಕೇರಿ |
| 141 | 53 | ಮಡಿಕೇರಿ | ಶ್ರೀ ಬಿ ಎಂ ಸುರೇಶ್, ಆದರ್ಶ ಬಾ/ರೆ, ಕಡಂಗ ಗ್ರಾಮ, ಮಡಿಕೇರಿ |
| 142 | 54 | ಮಡಿಕೇರಿ | ಶ್ರೀ ಪ್ರವೀಣ್ ಟಿ ಎಲ್, ಪ್ಯಾಡಿಂಗ್ಟನ್ ಬಾ/ರೆ, ಮಡಿಕೇರಿ ನಗರ |
| 143 | 55 | ಪೊನ್ನಂಪೇಟೆ | ಶ್ರೀ ಸಿ ಟಿ ಬೆಳಿಯ್ಯಪ್ಪ, ಸಿಎಲ್-9 ಸನ್ನದುದಾರರು, ಡೋರ್ ನಂ: 17, ಮುಖ್ಯರಸ್ತೆ, ಕುಟ್ಟಗ್ರಾಮ, ಪೊನ್ನಂಪೇಟೆ ತಾಲ್ಲೂಕು ಸಪ್ತಗಿರಿ ಬಾರ್ ಅಂಡ್ ರೆಸ್ಟೋರೆಂಟ್ |
| 144 | 56 | ಪೊನ್ನಂಪೇಟೆ | ಶ್ರೀ ಪಿ ಎಂ ಅನಂತ್ ಮತ್ತು ಪಿ ಎಂ ಸಂತೋಷ್, ಸಂತೋಷ್ ಬಾರ್ ಅಂಡ್ ರೆಸ್ಟೋರೆಂಟ್ಸಿಎಲ್-9 ಸನ್ನದುದಾರರು, ಸರ್ವೆ ನಂ: 85/9, ಮಾಲ್ದಾರೆ ಗ್ರಾಮ, ವಿರಾಜಪೇಟೆ ತಾಲ್ಲೂಕು |
| 145 | 57 | ಪೊನ್ನಂಪೇಟೆ | ಶ್ರೀಸಿ. ಡಿ. ಸುಬ್ಬಯ್ಯ, ಈಶ್ವರ ಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಡೋರ್ ನಂ: 180/8, ಹರಿಶ್ಚಂದ್ರಪುರ, ಗೋಣಿಕೊಪ್ಪ ಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 146 | 58 | ಪೊನ್ನಂಪೇಟೆ | ಶ್ರೀಯು ಐ ಸುಬ್ಬಯ್ಯ, ಬಿ. ಸಿ. ಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಡೋರ್ ನಂ:318(2), ಕೇಂಬುಕೊಲ್ಲಿ, ಕೆ. ಬಾಡಗ ಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 147 | 59 | ಪೊನ್ನಂಪೇಟೆ | ಶ್ರೀಮತಿ ಎ. ಸಿ. ಲಲಿತ, ತ್ರಿವೇಣಿಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಡೋರ್ ನಂ. 144, ಬಾಳೆಲೆ ಮುಖ್ಯ ರಸ್ತೆ, ಬಾಳೆಲೆ ಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 148 | 60 | ಪೊನ್ನಂಪೇಟೆ | ಶ್ರೀಪಿ ಎ. ಅಪ್ಪಚ್ಚು, ಶಾಂತಲಾಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಸರ್ವೆನಂ 24/2, ಅರ್ವತೊಕ್ಲು ಗ್ರಾಮ, ಪೊನ್ನಂಪೇಟೆ ಹೋಬಳಿ, ಪೊನ್ನಂಪೇಟೆ ತಾಲ್ಲೂಕು. |
| 149 | 61 | ಪೊನ್ನಂಪೇಟೆ | ಶ್ರೀ ಜಿ. ಎಸ್. ಗಣಪತಿ, ದುರ್ಗಾಬೋಜಿಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಸರ್ವೆ ನಂ: 125/7, ಹಳ್ಳಿಗಟ್ಟು ಗ್ರಾಮ, ಕುಂದರಸ್ತೆ, ಪೊನ್ನಂಪೇಟೆ, ಪೊನ್ನಂಪೇಟೆ ತಾಲ್ಲೂಕು. |
| 150 | 62 | ಪೊನ್ನಂಪೇಟೆ | ಶ್ರೀಎಂ ಬಿ. ತಿಮ್ಮಯ್ಯ, ಶಾಲಿಮಾರ್ಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಸರ್ವೆನಂ. 5/31, ಅರ್ವತೊಕ್ಲು ಗ್ರಾಮ, ಗೋಣಿಕೊಪ್ಪ, ಪೊನ್ನಂಪೇಟೆ ತಾಲ್ಲೂಕು. |
| 151 | 63 | ಪೊನ್ನಂಪೇಟೆ | ಮೆ\|\| ರಾಯಲ್ ಗ್ರ್ಯಾಂಡ್ ಬಾರ್ ಅಂಡ್ ರೆಸ್ಟೋರೆಂಟ್, ರಾಯಲ್ ಗ್ರ್ಯಾಂಡ್ಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಸರ್ವೆನಂ: 21/7, ನೋಕ್ಯ ಗ್ರಾಮ, ತಿತಿಮತಿ, ಪೊನ್ನಂಪೇಟೆ ತಾಲ್ಲೂಕು. |
| 152 | 64 | ಪೊನ್ನಂಪೇಟೆ | ಶ್ರೀಕೆ. ಬಿ. ಸುಮನ್, ಭವಾನಿಗ್ರ್ಯಾಂಡ್ಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದುದಾರರು, ಸರ್ವೆನಂ: 193/12, ನಾಲ್ಕೇರಿ ರಸ್ತೆ, ಶ್ರೀಮಂಗಲ, ಟಿ. ಶೆಟ್ಟಿಗೇರಿ ಗ್ರಾಮ, ಪೊನ್ನಂಪೇಟೆ ತಾಲ್ಲೂಕು. |
| 153 | 65 | ಪೊನ್ನಂಪೇಟೆ | ಮೆ\|\| ಕೊಡಗು ರಿಟೇಲ್ ಲಿಮಿಟೆಡ್, ನ್ಯಾಷನಲ್ ಬಾರ್ ಸಿಎಲ್-9 ಸನ್ನದುದಾರರು, ನಂ:28/9ಪಿ2, ಕಾನೂರು ಗ್ರಾಮ ಪೊನ್ನಂಪೇಟೆ ತಾಲ್ಲೂಕು |
| **ಒಟ್ಟು** | **65** | | |
| | | **ಸಿಎಲ್-14 ಸನ್ನದು** | |
| 154 | 1 | ಮಡಿಕೇರಿ | ಹೋಟೇಲ್ ಮಯೂರ ವ್ಯಾಲಿ ವ್ಯೂ, ಕೆ.ಎಸ್.ಟಿ.ಡಿ.ಸಿ, ಮಡಿಕೇರಿ ನಗರ |
| **ಒಟ್ಟು** | **1** | | |
| | | **ಹೊಂದಿಕೊಂಡಂತೆ ಆರ್‌ಬಿವಿ** | |
| 155 | 1 | ಕುಶಾಲನಗರ | ಕ್ಯಾಪ್ಟನ್ ಕ್ಲೈನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ (ಶ್ರೀ ವಿಜಯ ವಿ ಎಂ) |
| 156 | 2 | ಕುಶಾಲನಗರ | ಕೆ ಎಸ್ ಅರವಿಂದ ಅರವಿಂದ್ ಬೋರ್ಡಿಂಗ್ & ಲಾಡ್ಜಿಂಗ್ ಸರ್ವೆ ನಂ. 16/14, ಬಸವನಹಳ್ಳಿ ಗ್ರಾಮ, ಬೊಳ್ಳೂರು ಗ್ರಾಮ, ಗುಡ್ಡೆಹೊಸೂರು ಪಂಚಾಯಿತಿ, ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ |
| 157 | 3 | ವಿರಾಜಪೇಟೆ | ಶ್ರೀ ಕಿರಣ್ ಜೋಯಪ್ಪಸಿಎಲ್-7 ಸನ್ನದುದಾರರು, ಆಸ್ತಿ ಸಂಖ್ಯೆ 151800300400120239, ಸರ್ವೆ ನಂ:282/4, ಬಿಟ್ಟಂಗಾಲ ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ |
| 158 | 4 | ಪೊನ್ನಂಪೇಟೆ | ದುರ್ಗಾಬೋಜಿಗ್ರಾಂಡ್ ಎಲ್ 7 ಸನ್ನದುದಾರರು, ಗೋಣಿಕೊಪ್ಪ ಟೌನ್, ಪೊನ್ನಂಪೇಟೆ ತಾಲ್ಲೂಕು |
| 159 | 5 | ಪೊನ್ನಂಪೇಟೆ | ಗೌರವ ಕಾರ್ಯದರ್ಶಿ ಪ್ಲಾಂಟರ್ಸ್ ಕಲ್ಚರಲ್ ಅಸೋಸಿಯೇಷನ್ ಕ್ಲಬ್, ಸಿಎಲ್-4 ಸನ್ನದುದಾರರು, ಡೋರ್ ನಂ. 87, ಕೈಕೇರಿ ಗೋಣಿಕೊಪ್ಪ ಗ್ರಾಮ, ಪೊನ್ನಂಪೇಟೆ ತಾಲ್ಲೂಕು |
| **ಒಟ್ಟು** | **5** | | |
| | | **ವೈನ್ ಟಾವರಿನ್** | |
| 160 | 1 | ಮಡಿಕೇರಿ | ಒಶಿನಿ ಫಾರೂಕ್, ವೈನ್ ಟಾವರಿನ್ |
| **ಒಟ್ಟು** | **1** | | |

**ಆಅ 50 ಇಎಲ್‌ಕೆಸ್ಯ 2026**